ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 21-01-1971 - 2.

*<u>ಅವ್ಯಕ್ತ ವತನದ ಅಲೌಕಿಕ  ನಿಮಂತ್ರಣ</u>* (अव्यक्त वतन का अलौकिक निमंत्रण)

ಇಂದು ಮಿಲನ ಮಾಡಲು ಕರೆಯಲಾಗಿದೆ. ಈ ಅವ್ಯಕ್ತ ಮಿಲನ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಿ ಮಾಡಬಹುದು. ತಿಳಿಯಿತೇ? ಯಾರ್ಯಾರು ಎಷ್ಟು ಶಕ್ತಿ- ಸ್ವರೂಪರಾಗಿರುವರೆಂದು ಇಂದು ನೋಡುತ್ತಿದ್ದೇವೆ. ತಮ್ಮ ಚಿತ್ರಗಳಲ್ಲಿ ನಂಬರ್ ವಾರ್ ಶಕ್ತಿಯರ ಸ್ಮೃತಿಚಿಹ್ನೆಯನ್ನು ತೋರಿಸಲಾಗಿದೆ. ಶಕ್ತಿಯರನ್ನು ಯಾವ ಚಿತ್ರಗಳಿಂದ ಗುರುತಿಸಬಹುದು. ಗೊತ್ತಿದೆಯೇ? ತಮಗೆ ತಮ್ಮ ಶಕ್ತಿಗಳನ್ನು ಗುರುತಿಸುವ ಚಿತ್ರ ಗೊತ್ತಿಲ್ಲವೇ? ಭಿನ್ನ-ಭಿನ್ನ, ನಂಬರ್ ವಾರ್ ಶಕ್ತಿಯರ ಸ್ಮೃತಿಚಿಹ್ನೆ ಮಾಡಲಾಗಿದೆ. ತಮ್ಮ ಚಿತ್ರ ಮರೆತಿರುವಿರಾ? ಶಕ್ತಿಯರ ಚಿತ್ರಗಳಲ್ಲಿ ಭಿನ್ನ ಭಿನ್ನ ರೂಪದಿಂದ ಮತ್ತು ಭುಜಗಳ ರೂಪದಲ್ಲಿ ನಂಬರ್ ವಾರ್ ಶಕ್ತಿಯರ ಸ್ಮೃತಿಚಿಹ್ನೆ ಇದೆ. ಆ ಚಿತ್ರಗಳಲ್ಲಿ ಕೆಲವರು ಅಷ್ಟ ಶಕ್ತಿಗಳನ್ನು ಧಾರಣೆ ಮಾಡಿಕೊಂಡವರು ಇದ್ದಾರೆ. ಕೆಲವರು ಅದಕ್ಕಿಂತ ಹೆಚ್ಚು, ಕೆಲವರು ಅದಕ್ಕಿಂತ ಕಡಿಮೆ. ಕೆಲವೆಡೆ ನಾಲ್ಕು ಭುಜಗಳು, ಕೆಲವೆಡೆ ಎಂಟು ಭುಜಗಳು, ಇನ್ನು ಕೆಲವೆಡೆ 16 ಭುಜಗಳನ್ನೂ ತೋರಿಸುತ್ತಾರೆ. ಇಂದು ಪ್ರತಿಯೊಬ್ಬರೂ ಎಷ್ಟು ಶಕ್ತಿಗಳನ್ನು ಧಾರಣೆ ಮಾಡಿರುವರು ಎಂದು ನೋಡುತ್ತಿದ್ದಾರೆ. ಮಾಸ್ಟರ್ ಸರ್ವಶಕ್ತಿವಾನ್ ಎಂದು ಹೇಳಿಸಿಕೊಳ್ಳುತ್ತೀರಲ್ಲವೇ? ಮಾಸ್ಟರ್ ಸರ್ವಶಕ್ತಿವಂತ ಎಂದರೆ ಸರ್ವಶಕ್ತಿಗಳನ್ನು ಧಾರಣೆ ಮಾಡುವವರು. ತಮ್ಮ ಶಕ್ತಿ-ಸ್ವರೂಪದ ಸಾಕ್ಷಾತ್ಕಾರವಾಗುತ್ತದೆಯೇ? ಅವ್ಯಕ್ತ ವತನದಲ್ಲಿ ಪ್ರತಿಯೊಬ್ಬರ ಶಕ್ತಿ ರೂಪವನ್ನು ನೋಡಿದರೆ ಏನು ಕಂಡುಬರುತ್ತದೆ? ವತನದಲ್ಲಿಯೂ ಬಾಪ್ ದಾದಾರ ಅಲೌಕಿಕ ಪ್ರದರ್ಶನಿಯಿದೆ. ಅವರ ಎಷ್ಟು ಚಿತ್ರಗಳಿವೆ? ತಮ್ಮ ಚಿತ್ರಗಳು ಎಣಿಸಲು ಬರುತ್ತವೆ ಆದರೆ ಬಾಪ್ ದಾದಾರ ಪ್ರದರ್ಶನಿಯ ಚಿತ್ರಗಳು ಎಣಿಸಲು ಬರುತ್ತವೆಯೇ? ಬಾಪ್ ದಾದಾ ನಿಮಂತ್ರಣವಂತೂ ಕೊಡುತ್ತಾರೆ. ನಿಮಂತ್ರಣ ಕೊಡುವವರು ಕೊಡುತ್ತಾರೆ, ತಲುಪುವುದು ಬರುವವರ ಕೆಲಸವಾಗಿದೆ. ಬಾಪ್ ದಾದಾ ತಮ್ಮೆಲ್ಲರಿಗಿಂತ ಕೋಟಿ ಪಟ್ಟು ಹೆಚ್ಚು ಖುಷಿಯಿಂದ ನಿಮಂತ್ರಣ ಕೊಡುತ್ತಾರೆ. ಅವ್ಯಕ್ತ ಸ್ಥಿತಿಯ ಅನುಭವ ಸ್ವಲ್ಪ ಸಮಯ ಬಿಡದಂತೆ ಮಾಡಿ ಆಗ ವಿಜ್ಞಾನದಿಂದ ಹೇಗೆ ದೂರದ ವಸ್ತುಗಳು ಸಮ್ಮುಖದಲ್ಲಿ ಕಾಣುತ್ತವೆಯೋ ಹಾಗೆ ಅವ್ಯಕ್ತ ವತನದ ಕ್ರಿಯಾಕಲಾಪಗಳು ಇಲ್ಲಿ ಸ್ಪಷ್ಟವಾಗಿ ಕಂಡು ಬರುವ ಅನುಭವ ಮಾಡುವಿರಿ. ತಮ್ಮ ಬುದ್ಧಿಬಲದಿಂದ ಸರ್ವಶಕ್ತಿವಂತನ ಈ ಸ್ವರೂಪದ ಸಾಕ್ಷಾತ್ಕಾರ ಮಾಡಬಹುದು.

ವರ್ತಮಾನ ಸಮಯ ಸ್ಮೃತಿ ಕಡಿಮೆಯಿರುವುದರಿಂದ ಸಾಮರ್ಥ್ಯವೂ ಇಲ್ಲ. ವ್ಯರ್ಥ ಸಂಕಲ್ಪ ವ್ಯರ್ಥ ಶಬ್ದ, ವ್ಯರ್ಥ ಕರ್ಮವಾಗುವುದರಿಂದ ಸಮರ್ಥರಾಗಲಾಗುವುದಿಲ್ಲ. ವ್ಯರ್ಥವನ್ನು ಅಳಿಸಿದರೆ ಸಮರ್ಥರಾಗುವಿರಿ. ಪ್ರತಿಯೊಬ್ಬರ ಪುರುಷಾರ್ಥದ ಭಿನ್ನ ಭಿನ್ನ ಸ್ವರೂಪವನ್ನು ವತನದಲ್ಲಿ ನೋಡುತ್ತಿರುತ್ತಾರೆ. ಬಹಳ ಚೆನ್ನಾಗಿರುತ್ತದೆ. ಪ್ರತಿಯೊಬ್ಬರೂ ತಮ್ಮನ್ನು ತಾವು ನೋಡಿಕೊಳ್ಳದಿರದಷ್ಟು ವತನದಲ್ಲಿ ಪ್ರತಿಯೊಬ್ಬರ ಅನೇಕ ರೂಪಗಳನ್ನು ನೋಡುತ್ತೇವೆ. ತಾವೂ ಸಹ ಒಂದು ದಿನ ವಿಶೇಷ ಗಮನ ಕೊಟ್ಟು ಇಡೀ ದಿನದಲ್ಲಿ ನನ್ನ ರೂಪಗಳು ಎಷ್ಟು ಮತ್ತು ಹೇಗೆ ಇದ್ದವು ಎಂದು ನೋಡಿ. ಆಗ ವಿಭಿನ್ನ ಭಂಗಿಮಗಳನ್ನು ನೋಡಿ ನಗೆ ಬರುವುದು. ಇತ್ತೀಚಿಗೆ ಒಬ್ಬರನ್ನೇ ಅನೇಕ ಭಂಗಿಮಗಳಲ್ಲಿ ಫೋಟೋ ತೆಗೆಯುತ್ತಾರೆ ಆದ್ದರಿಂದ ತಮ್ಮದನ್ನು ನೋಡಿ. ತಮ್ಮ ಬಹುರೂಪದ ಸಾಕ್ಷಾತ್ಕಾರ ಮಾಡಿ. ವತನದಲ್ಲಿ ಬರುವ ಮನಸ್ಸು ಎಲ್ಲರಿಗೂ ಇದೆ ಆದರೆ ಬ್ರಾಹ್ಮಣರ ಕರ್ತವ್ಯವನ್ನೇನು ಮಾಡಬೇಕೋ ಅದನ್ನೆಲ್ಲ ಮಾಡಿರುವೆವಾ ಎಂದು ತಮಗೆ ತಾವೇ ಕೇಳಿಕೊಳ್ಳಿ. ಸರ್ವ ಕರ್ತವ್ಯ ಸಂಪನ್ನವಾದ ಮೇಲೆ ಸಂಪೂರ್ಣರಾಗುವಿರಿ.

ಒಂದೊಂದು ಹೆಜ್ಜೆ ಗಮನವಿಟ್ಟು ನಡೆಯುವಂತಹ ಸಮಯ ಈಗಿದೆ. ಗಮನವಿಲ್ಲದಿರುವ ಕಾರಣ ಪುರುಷಾರ್ಥದ ಒತ್ತಡದಲ್ಲಿರುತ್ತೀರಿ. ಒಂದು ಕಡೆಗೆ ವಾತಾವರಣದ ಒತ್ತಡ, ಇನ್ನೊಂದು ಕಡೆಗೆ ಪುರುಷಾರ್ಥದ ಒತ್ತಡವಿರುತ್ತದೆ. ಆದ್ದರಿಂದ ಕೇವಲ ಒಂದು ಶಬ್ದವನ್ನು ಜೋಡಿಸಿಕೊಳ್ಳಿ ಗಮನ. ಆಗ ಈ ಬಹುರೂಪ ಒಂದೇ ಸಂಪೂರ್ಣ ರೂಪವಾಗುವುದು. ಆದ್ದರಿಂದ ಈಗ ಹೆಜ್ಜೆಹೆಜ್ಜೆಯ

ಮೇಲೆ ಗಮನವಿರಲಿ. ಇತ್ತೀಚೆಗೆ ಎಲ್ಲಾ ಆತ್ಮರು ಸುಖ ಮತ್ತು ಶಾಂತಿಯ ಅನುಭವ ಮಾಡಲು ಬಯಸುತ್ತಾರೆ ಎಂದು ಹೇಳಿದ್ದೆವು. ಹೆಚ್ಚು ಕೇಳಲು ಬಯಸುವುದಿಲ್ಲ. ಅನುಭವ ಮಾಡಿಸಲು ಸ್ವಯಂ ಅನುಭವೀ ಸ್ವರೂಪರಾದಾಗ ಎಲ್ಲಾ ಆತ್ಮರ ಇಚ್ಛೆಯನ್ನು ಪೂರ್ಣ ಮಾಡಬಹುದು. **ಧನದ ಭಿಕ್ಷುಕರು ಹೇಗೆ ಭಿಕ್ಷೆ ಬೇಡಲು ಬರುತ್ತಾರೆಯೋ ಹಾಗೆ ಶಾಂತಿಯ ಅನುಭವದ ಭಿಕ್ಷುಕ ಆತ್ಮರು ಭಿಕ್ಷೆಯನ್ನು ಪಡೆಯಲು ಒದ್ದಾಡುವರು.** ಎಂದು ದಿನದಿನಕ್ಕೆ ನೋಡುವಿರಿ. ಈಗ ಕೇವಲ ಒಂದು ದುಃಖದ ಅಲೆ ಬಂದಾಗ ಅಲೆಗಳಲ್ಲಿ ಮುಳುಗುತ್ತಿರುವ ಆತ್ಮರು ಒಂದು ಎಳ್ಳಿನ ಆಶ್ರಯವನ್ನು ಹುಡುಕುವಂತೆ, ತಮ್ಮ ಸಮ್ಮುಖದಲ್ಲಿ ಅನೇಕ ಭಿಖಾರಿ ಆತ್ಮರು ಭಿಕ್ಷೆ ಬೇಡಲು ಬರುವರು. ಇಂತಹ ಒದ್ದಾಡುತ್ತಿರುವಂತಹ ಭಿಕ್ಷುಕ ನೀರಡಿಸಿದ ಆತ್ಮರ ದಾಹವನ್ನು ದೂರ ಮಾಡಲು ತಮ್ಮನ್ನು ಅತೀಂದ್ರಿಯ ಸುಖ ಅಥವಾ ಸರ್ವಶಕ್ತಿಗಳಿಂದ ಭರಪೂರ್(ಭರ್ತಿ) ಮಾಡಿಕೊಂಡಂತಹ ಅನುಭವ ಮಾಡುತ್ತೀರಾ? ತಮ್ಮ ಸ್ಥಿತಿಯನ್ನು ಕಾಯಂ ಇಟ್ಟುಕೊಂಡು ಅನ್ಯ ಆತ್ಮರನ್ನು ಸಂಪನ್ನ ಮಾಡುವಷ್ಟು ಸರ್ವ ಶಕ್ತಿಗಳ ಖಜಾನೆ, ಇಷ್ಟೊಂದು ಅತೀಂದ್ರಿಯ ಸುಖ ಖಜಾನೆಯನ್ನು ಜಮಾ ಮಾಡಿದ್ದೀರಾ? ಸರ್ವರ ಜೋಳಿಗೆಯನ್ನು ತುಂಬಿಸುವಂತಹ ದಾತಾನ ಮಕ್ಕಳಾಗಿರುವಿರಿ. ಈಗ ಇಂತಹ ದೃಶ್ಯ ಬಹಳ ಬೇಗನೇ ಬರಲಿದೆ. ವೈದ್ಯರೂ ಸಹ ಈ ರೋಗಕ್ಕೆ ಔಷಧ ಕೊಡಲಾರರು. ಆಗ ತಮ್ಮ ಬಳಿಗೆ ಈ ಔಷಧವನ್ನು ತೆಗೆದುಕೊಳ್ಳಲು ಬರುವರು. ನಿಧಾನವಾಗಿ ಸುಖ-ಶಾಂತಿಯ ಅನುಭವ ಬ್ರಹ್ಮಕುಮಾರಿಯರ ಬಳಿ ಸಿಗುತ್ತದೆ ಎಂಬ ಪ್ರಚಾರವಾಗುವುದು. ಅಲೆದಾಡಿ ನಿಜವಾದ ದ್ವಾರಕ್ಕೆ ಅನೇಕಾನೇಕ ಆತ್ಮರು ಬರುವರು. ಅಂತಹ ಆತ್ಮರನ್ನು ಸಂತುಷ್ಟ ಮಾಡಲು ತಮ್ಮ ಎಲ್ಲಾ ಕರ್ಮಗಳಿಂದ ಸಂತುಷ್ಟರಾಗಿರುವಿರಾ? ಸಂತುಷ್ಟ ಆತ್ಮರೇ ಅನ್ಯರನ್ನು ಸಂತುಷ್ಟ ಮಾಡಬಲ್ಲರು. ಈಗ ಇಂತಹ ಸೇವೆಯನ್ನು ಮಾಡಲು ತಮ್ಮನ್ನು ತಯಾರು ಮಾಡಿಕೊಳ್ಳಿ. ಈ ರೀತಿ ಒದ್ದಾಡುತ್ತಿರುವಂತಹ ಆತ್ಮರು ಏಳು ದಿನದ ಕೋರ್ಸ್ ಕೇಳಲು ನಿಲ್ಲುವುದಿಲ್ಲ. ಆ ಸಮಯದಲ್ಲಿ ಅಂತಹ ಆತ್ಮರಿಗೆ ಸ್ವಲ್ಪವಾದರೂ ಅನುಭವದ ಪ್ರಾಪ್ತಿ ಮಾಡಿಸಬೇಕಾಗುವುದು. ಆದ್ದರಿಂದ ಈಗ ತಮ್ಮ ಬ್ರಾಹ್ಮಣತನದ ಕರ್ತವ್ಯವನ್ನು ಸಂಪನ್ನ ಮಾಡಲು ತಮ್ಮನ್ನು ಸಂಪೂರ್ಣ ಮಾಡಿಕೊಳ್ಳಿ. ಈಗ ಯಾವ ಸೇವೆ ಮಾಡಬೇಕೆಂದು ತಿಳಿಯಿತೇ? ಎಲ್ಲಿಯವರೆಗೆ ತಾವು ವ್ಯಕ್ತದಲ್ಲಿ ವ್ಯಸ್ತರಾಗಿರುವಿರೋ ಅಲ್ಲಿಯವರೆಗೆ ಬಾಪ್ ದಾದಾ ಅವ್ಯಕ್ತದಲ್ಲಿಯೂ ಸಹಯೋಗಿಯಾಗಿರುತ್ತಾರೆ. ಸಾಹಸಿ ಮಕ್ಕಳಿಗೆ ತಂದೆ ಸಹಯೋಗಿಯಾಗುತ್ತಾರೆ. ಹಾಗಾದರೆ ಯಾರು ಹೆಚ್ಚು ವ್ಯಸ್ತರೆಂಬುದನ್ನು ಹೇಳಿ? ಆರಂಭದಲ್ಲಿ ಧ್ಯಾನದಲ್ಲಿ ಹೋಗುವವರಿಗಿಂತಲೂ ಚೆನ್ನಾಗಿ ವತನದ ಅನುಭವವನ್ನು ಮಾಡುತ್ತಿದ್ದಂತೆ (ಮಕ್ಕಳು ಅದನ್ನು ಅನುಭವ ಮಾಡಿಸಿ ಎಂದು ಕೇಳಿದರು) ಈಗಲೂ ಅನುಭವ ಮಾಡಿ. ಬುದ್ಧಿಯ ವಿಮಾನವಂತೂ ಇದೆ. ಕೆಲವು ಮಕ್ಕಳು ಕೆಲವು ಮಾತುಗಳಲ್ಲಿ ಹಠ ಮಾಡುತ್ತಾರೆ ಆಗ ತಂದೆಗೆ ಕೇಳಬೇಕಾಗುತ್ತದೆ. ಈಗ ಈ ಅನುಭವ ಮಾಡುವ ಹಠಮಾಡಿ. ಓಳ್ಳೆಯದು.

**ಪಾರ್ಟಿಯ ಜೊತೆಗೆ ಮಿಲನ.**

I. ತ್ರೇತಾಯುಗದ ಅಂತ್ಯಕ್ಕೆ ಪ್ರಜೆಗಳು ಬೇಕು, ದ್ವಾಪರಯುಗಕ್ಕೆ ಭಕ್ತರು ಬೇಕು. ಭಕ್ತರನ್ನೂ ತಯಾರು ಮಾಡಿ ಮತ್ತು ಪ್ರಜೆಗಳನ್ನೂ ತಯಾರು ಮಾಡಿ, ಕೊಡುತ್ತಾ ಹೋಗಿ, ಜೋಳಿಗೆಯನ್ನು ತುಂಬುತ್ತಾ ಹೋಗುವಂತಹ ಸಮಯ ಇನ್ನು ಬರಲಿದೆ. ಎಷ್ಟೊಂದು ಒದ್ದಾಡುತ್ತಿರುವಂತಹ ಆತ್ಮರು ಬರುವರು. ಅವರಿಗೆ ಒಂದು ಹನಿಯನ್ನು ಕೊಟ್ಟರೂ ಖುಷಿಪಡುವರು. ಇಂತಹ ಸಮಯ ಈಗ ಬರಲಿದೆ. ಮಿನಿಟ್ ಮೋಟರ್ ಎಂದು ಹೇಳುತ್ತಾರಲ್ಲವೆ, ಅಂತಹ ಮಶಿನರಿಯಂತೆ ನಡೆಯುವುದು. ದೃಷ್ಟಿ, ವೃತ್ತಿ, ಸ್ಮೃತಿ, ವಾಣಿ ಎಲ್ಲವುಗಳಿಂದ ಸೇವೆ ನಡೆಯುವುದು. ತಮ್ಮ ಮನೆಯೂ ಆಶ್ರಮವಾಗಿದೆ. ಅದರಿಂದ ಯಾರೆಲ್ಲಾ ಬರುವರೋ ಅವರು ಸೇವಾಕೇಂದ್ರಕ್ಕೆ ಹೋಗಲು ಹಿಂಜರಿಯುವುದಿಲ್ಲ. ಇವರು (ಹಿರಿಯರು) ಸೇವೆಯ ಸ್ಥಾಪನೆಯಲ್ಲಿ ಪೆಟ್ಟು ತಿಂದರು. ತಾವುಗಳು ಮಾಡಲ್ಪಟ್ಟದ್ದರ ಮೇಲೆ ಬಂದಿರುವಿರಿ. ಇವರು ಪರಿಶ್ರಮ ಪಟ್ಟು ಬೆಣ್ಣೆ ತೆಗೆದರು, ತಾವು ತಿನ್ನುವ ಸಮಯದಲ್ಲಿ ಬಂದಿರುವಿರಿ. ಆದರೆ ಬೆಣ್ಣೆ ತಿನ್ನುವವರು ಎಷ್ಟು ಶಕ್ತಿಶಾಲಿಯಾಗಿರಬೇಕು?

ಸದಾ ಯಾವೆಲ್ಲ ಆತ್ಮಗಳು ಸಂಪರ್ಕದಲ್ಲಿ ಬರುತ್ತವೆಯೋ ಅವರಿಗೆ ಅವಶ್ಯಕತೆಯಿರುವುದು ಸಿಗಲಿ ಎಂಬ ವಿಚಾರವಿರಲಿ. ರೊಟ್ಟಿಯ ಅವಶ್ಯಕತೆ ಇರುವವರಿಗೆ ನೀರನ್ನು ಕೊಟ್ಟರೆ... ಯಾರಿಗೆ ಗೌರವ ಕೊಡಬೇಕು, ಅವರಿಗೆ ಜಮಖಾನೆಯ ಮೇಲೆ ಕುಳಿತುಕೊಳ್ಳಿ ಎಂದರೆ ಹೇಗೆ ಕುಳಿತುಕೊಳ್ಳುವರು? ಕೆಲವರಿಗೆ ಜಮಖಾನೆಯ ಮೇಲೆ ಕುಳ್ಳಿರಿಸಿ, ಕೆಲವರಿಗೆ ಸೋಫಾದ ಮೇಲೆ ಕುಳ್ಳಿರಿಸಿ ಕೋರ್ಸ್ ಕೊಡಲಾಗುತ್ತದೆ. ಗವರ್ನರ್ ಬಂದಾಗ ಏನು ಮಾಡಿದಿರಿ? ಗೌರವ ಕೊಟ್ಟಿರಲ್ಲವೇ? ಸಾಮಾನ್ಯ ರೀತಿಯಲ್ಲಿ ನಡೆದರೆ ಆಗುವುದಿಲ್ಲ. ಕೆಲವು ಕಡೆಗೆ ಗೌರವ ಕೊಟ್ಟು ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲರಿಗೂ ಒಂದೇ ತರಹದ ಡೋಜ್ ಕೊಡುವುದರಿಂದ ರೋಗಿಗಳಾಗುತ್ತಾರೆ. ಇತ್ತೀಚೆಗೆ ವೈದ್ಯರ ಬಳಿಗೆ ರೋಗಿಗಳು ಬಂದಾಗ ಬಹಳ ದಿನದ ಕೋರ್ಸ್ ಬಯಸುವುದಿಲ್ಲ. ಬರುತ್ತಲೇ ಇಂಜೆಕ್ಷನ್ ಹಾಕಿ ಮುಗಿಸುವರು. ಇಲ್ಲಿಯೂ ಹಾಗೆಯೇ ಇದೆ. ಬರುತ್ತಲೇ ಅವರನ್ನು ಯೋಗದಲ್ಲಿ ಹಾರಿಸಬೇಕು. ಇಂತಹ ಸೇವೆಯನ್ನು ಮಾಡುತ್ತೀರಾ? ಸ್ವಭಾವದಿಂದಲೂ ಸೇವೆ ಮಾಡಬಹುದು. ಡ್ರಾಮಾ ಅನುಸಾರ ಕೆಲವರಿಗೆ ಒಳ್ಳೆಯ ಸ್ವಭಾವವಿರುವುದು. ಆಗ ಆ ಸ್ವಭಾವದ ಸಹಯೋಗ ಸಿಗುವುದು. ಗೆಳತನ ಮಾಡಿ ಕೆಲವರಿಗೆ ಅನುಭವದಿಂದ ಪ್ರಭಾವಿತ ಮಾಡಬಹುದು. ಇವರು ಜ್ಞಾನ ಕೇಳುವುದಿಲ್ಲ ಎಂದು ಬಿಡಬೇಡಿ. ಮೊದಲು ಸಂಪರ್ಕದಲ್ಲಿ ತಂದು ಮತ್ತೆ ಸಂಬಂಧದಲ್ಲಿ ತನ್ನಿ, ಸ್ವಭಾವದಿಂದ ಯಾರನ್ನಾದರೂ ಸಮೀಪ ತರಬಹುದು. ಇದರ ಪ್ರಯೋಗ ಮಾಡಿ. ತಾವೆಲ್ಲರೂ ವಿಶ್ವದ ಕಲ್ಯಾಣದ ಆಧಾರ ಮೂರ್ತಿಗಳಾಗಿದ್ದೀರಿ. ತಮ್ಮನ್ನು ಆಧಾರ ಮೂರ್ತಿ ಎಂದು ತಿಳಿಯುವುದರಿಂದ ಅನೇಕರ ಉದ್ಧಾರ ಮಾಡಬಹುದು. ಬ್ಯಾಂಕನಲ್ಲಿ ಹೇಗೆ ಭಿನ್ನ ಭಿನ್ನ ಖಾತೆಗಳಿರುತ್ತವೆಯೋ ಹಾಗೆಯೇ ಯಾರು ಇಂತಹ ಸೇವೆ ಮಾಡುತ್ತಾರೋ ಅದು ಅವರ ಖಾತೆಯಲ್ಲಿ. ಯಾರು ಯಾರ ಸೇವೆಗೆ ನಿಮಿತ್ತರಾಗುತ್ತಾರೋ ಅವರದು ಆ ಸಮಯದಲ್ಲಿ, ಅಂತಹ ಖಾತೆಯಲ್ಲಿ ಜಮಾ ಆಗುತ್ತದೆ. ಎಷ್ಟು ಆಳವಾದ ಅಡಿಪಾಯವೋ ಅಷ್ಟು ಗಟ್ಟಿಯಾಗಿರುತ್ತದೆ. ಅದೇ ರೀತಿ ಸಂಪರ್ಕದಲ್ಲಿ ತಂದಿರಿ ಆದರೆ ಸಂಬಂಧದಲ್ಲಿ ತರಬೇಕು. ಯಾರು ಅನೇಕರನ್ನು ಸಂಬಂಧದಲ್ಲಿ ತರುತ್ತಾರೋ ಅವರು ಸಮೀಪದ ಸಂಬಂಧದಲ್ಲಿ ಬರುತ್ತಾರೆ. ಯಾರು ಅನೇಕರನ್ನು ಸಂಪರ್ಕದಲ್ಲಿ ತರುತ್ತಾರೋ ಅವರು ಅಲ್ಲಿಯೂ ಸಮೀಪ ಸಂಪರ್ಕದಲ್ಲಿ ಬರುವರು.

2. ಇಡೀ ದಿನದಲ್ಲಿ ಸರಿಯಾಗಿ ಲೆಕ್ಕವನ್ನು ತೆಗೆಯಬಲ್ಲಿರಾ? ಮೇಲ್ ಗಾಡಿಯ  ಗತಿಯಲ್ಲಿದೆಯೆಂದು ಗೊತ್ತಾಗುತ್ತದೆಯೇ? ಬಾಪ್ದಾದಾರ ಸಂಸ್ಕಾರದೊಂದಿಗೆ ತುಲನೆ ಮಾಡಿಕೊಳ್ಳಬೇಕು. ಯಾರು ಸಾಕಾರ ರೂಪದಲ್ಲಿ ಜೊತೆಗಿದ್ದು ಕ್ಷಣದ ಸಂಕಲ್ಪ, ಸಂಸ್ಕಾರದ ಅನುಭವ ಮಾಡಿರುವವರೋ ಅವರೊಂದಿಗೆ ತಾವು ತುಲನೆ ಮಾಡಬೇಕು. ಬೇರೆಯವರನ್ನು ಬುದ್ಧಿಯಿಂದ ಸೆಳೆಯಬೇಕಾಗುತ್ತದೆ. ತಾವು ಕೇವಲ ಸಮ್ಮುಖದಲ್ಲಿ ತರಬೇಕಾಗುತ್ತದೆ. ಆದ್ದರಿಂದ ಸಂಕಲ್ಪ, ಸಂಸ್ಕಾರಗಳನ್ನು  ಹೊಂದಾಣಿಕೆ ಮಾಡಿ, ಸಮಯವನ್ನು ವ್ಯರ್ಥ ಮಾಡಬೇಡಿ, ಏನು ಮಾಡಬಾರದು, ಏನು ಮಾಡಬೇಕೆಂದು ತ್ವರಿತವಾಗಿ ನಿರ್ಣಯ ಮಾಡಬೇಕು. ಇದರಲ್ಲಿ ಸಮಯದ ಉಳಿತಾಯವಿದೆ ಮತ್ತು ಶಕ್ತಿಯೂ ನಷ್ಟವಾಗುವುದಿಲ್ಲ. ಉಳಿತಾಯವಾಗುವುದು. ತಮ್ಮ ಪುರುಷಾರ್ಥದಿಂದ ಸಂತುಷ್ಟರಾಗಿರುವಿರಾ? ಸಂಪೂರ್ಣರಾಗುವ ಯಾವ ಯೋಜನೆಯನ್ನು ಮಾಡಿರುವಿರಿ? ತಮ್ಮನ್ನು ಪರಿವರ್ತಿಸಿಕೊಂಡಾಗ ಬೇರೆಯವರ ಸೇವೆ ಮಾಡಬಹುದು. ಸಂತುಷ್ಟತೆಯಲ್ಲಿ ಸರ್ಟಿಫಿಕೇಟ್ ಸಿಕ್ಕಿದೆಯಾ? ಮನ ಪಸಂದಿಯ ಜೊತೆಗೆ ಲೋಕ ಪಸಂದಿಯಾಗಬೇಕು, ಜವಾಬ್ದಾರರಾಗಿರುವವರು ಸರ್ಟಿಫಿಕೇಟ್ ಕೊಟ್ಟಾಗ ಲೋಕ ಪಸಂದ ಆದಿರಿ, ರಚನೆಯನ್ನೂ ಸಂತುಷ್ಟವಾಗಿಡಬೇಕು. ಸಂತುಷ್ಟರಾಗಿದ್ದಾರೆಯೇ ಎಂದು ಅವರ ನಡತೆಯಿಂದಲೇ ತಿಳಿದುಕೊಳ್ಳಬೇಕು.

ಮಧುಬನಕ್ಕೆ ಬಂದಾಗ ನಿಮಿತ್ತರಾದ ಸಹೋದರಿಯರಿಂದ ಸರ್ಟಿಫಿಕೇಟ್ ತೆಗೆದುಕೊಂಡು ಹೋಗಿ. ತಮ್ಮ ಎಲ್ಲಾ ಸರ್ಟಿಫಿಕೇಟ್ ಧರ್ಮರಾಜಪುರಿಯಲ್ಲಿ ಕೆಲಸಕ್ಕೆ ಬರುವವು. ರಸ್ತೆಯಲ್ಲಿ ಕಾರು ನಡೆಸುವವನು ಲೈಸೆನ್ಸ್ ತೋರಿಸುವಂತೆ ಧರ್ಮರಾಜಪುರಿಯಲ್ಲಿ ಈ ಸರ್ಟಿಫಿಕೇಟ್ ಕೆಲಸಕ್ಕೆ ಬರುವವು. ಆದ್ದರಿಂದ ಎಷ್ಟು ಸಾಧ್ಯವೋ ಅಷ್ಟು ಸರ್ಟಿಫಿಕೇಟ್ ತೆಗೆದುಕೊಳ್ಳಿ ಏಕೆಂದರೆ ಟ್ರಿಬ್ಯುನಲನಲ್ಲಿಯೂ

ಇದೇ ಮಹಾರಥಿಗಳು ಕುಳಿತುಕೊಳ್ಳುವರು. ಇವರ ಸರ್ಟಿಫಿಕೇಟ್ ಕೆಲಸಕ್ಕೆ ಬರುವವು. ಇಲ್ಲಿಂದ ಸರ್ಟಿಫಿಕೇಟ್ ತೆಗೆದುಕೊಂಡು ಹೋಗುವುದರಿಂದ ಅನ್ಯ ಆತ್ಮರನ್ನು ಸಂತುಷ್ಟಗೊಳಿಸುವ ವಿಶೇಷತೆ ಬರುವುದು. ಅನುಭವಿ ಸಹೋದರಿಯರು ಅನೇಕರನ್ನು ಸಂತುಷ್ಟಗೊಳಿಸುವ ಶಿಕ್ಷಣ ಕೊಡುತ್ತಾರೆ. ಅನೇಕರನ್ನು ಸಂತುಷ್ಟ ಮಾಡುವ ಯುಕ್ತಿಯಾಗಿದೆ ಸರ್ಟಿಫಿಕೇಟ್.

ಸ್ನೇಹಿಯಾಗಲು ಬರುತ್ತದೆಯೋ ಅಥವಾ ಶಕ್ತಿಯಾಗಲು ಬರುತ್ತದೆಯೋ? ಶಕ್ತಿಯನ್ನು ತುಂಬುವಂತಹ ರಚಯಿತರ ರಚನೆಯೂ ಶಕ್ತಿಶಾಲಿಯಾಗಿರುವ ಕಾರಣ ಪುರುಷಾರ್ಥದಲ್ಲಿ ಒಮ್ಮೊಮ್ಮೆ ಒಂದೊಂದು ರೀತಿಯಲ್ಲಿ ಏರಿಳಿತಕ್ಕೆ ಬರುವುದಿಲ್ಲ. ವಿದ್ಯಾರ್ಥಿಗಳು ಏರಿಳಿತದಲ್ಲಿ ಬಂದರೆ ಶಕ್ತಿ ತುಂಬುವ ಯುಕ್ತಿಯಿಲ್ಲವೆಂದು ತಿಳಿದುಕೊಳ್ಳಬೇಕು. ಸಮೀಪ ತರುವುದೇ ವಿಶೇಷತೆಯಾಗಿದೆ. ಮಾಯೆಯನ್ನು ಎದುರಿಸುವಂತೆ ಶಕ್ತಿಶಾಲಿ ಮಾಡುವುದನ್ನು ಜೋಡಿಸಿಕೊಳ್ಳಿ. ವಿಘ್ನ ಬಂದರೂ ಹೆಚ್ಚು ಸಮಯ ಇರಬಾರದು. ಬರಬೇಕು ಮತ್ತು ಹೋಗಬೇಕು – ಇದಾಗಿದೆ ಶಕ್ತಿ ರೂಪದ ಲಕ್ಷಣ. ತಮ್ಮೊಂದಿಗೆ ಸಂತುಷ್ಟರಾಗಿರುವವರು ಅನ್ಯರಿಂದಲೂ ಸಂತುಷ್ಟರಾಗಿರುತ್ತಾರೆ. ಬೇರೆ ಯಾರಾದರೂ ಅಸಂತುಷ್ಟ ಮಾಡಿದರೂ ಸ್ವಯಂ ಸಂತುಷ್ಟರಾಗಿದ್ದರೆ ಎಲ್ಲರೂ ಅವರಿಂದ ಸಂತುಷ್ಟರಾಗುತ್ತಾರೆ. ಅನ್ಯರ ದುರ್ಬಲತೆಗಳನ್ನು ತಿಳಿದು ನಡೆದರೆ ತಾವೇ ಸಂಪೂರ್ಣರಾಗುವರು. ಈ ಕಾರಣದಿಂದ ನನ್ನ ಪುರುಷಾರ್ಥ ಸರಿಯಾಗಿಲ್ಲವೆಂದು ಎಂದೂ ಯೋಚಿಸಬೇಡಿ. ನನ್ನ ದುರ್ಬಲತೆಯಿದೆ ಎಂದು ಯೋಚಿಸುವುದರಿಂದ

ಬೇಗನೆ ಉನ್ನತಿಯಾಗುವುದು. ಇಲ್ಲವಾದರೆ ಬೇರೆಯವರ ದುರ್ಬಲತೆಯ ನಿರ್ಣಯದಲ್ಲಿಯೇ ಬಹಳ ಸಮಯ ಹೋಗುತ್ತದೆ.

ಸಾಕಾರನ ಸ್ನೇಹಿಯೋ ಅಥವಾ ನಿರಾಕಾರನ ಸ್ನೇಹಿಯೋ? ನಿರಾಕಾರನ ಸ್ನೇಹಿಗಳ ವಿಶೇಷತೆಯಾಗಿದೆ ಅವರು ಹೆಚ್ಚು ನಿರಾಕಾರಿ ಸ್ಥಿತಿಯಲ್ಲಿ ಸ್ಥಿತರಾಗಿರುವರು, ಸಾಕಾರನ ಸ್ನೇಹಿಗಳು ಚರಿತ್ರವಂತರಾಗಿರುವರು, ಅವರ ಒಂದೊಂದು ಚರಿತ್ರೆ ಸೇವೆಯಾಗಿರುವವು. ಅವರು ಬೇರೆಯವರನ್ನೂ ಸ್ನೇಹದಲ್ಲಿ ಹೆಚ್ಚು ತರುವರು, ನಿರಾಕಾರಿ, ನಿರಹಂಕಾರಿ ಎರಡೂ ಸಮಾನವಾಗಿರಬೇಕು.

ಬಾಲಕರಾಗಿರುವುದು ಚೆನ್ನಾಗಿದೆಯೋ ಮಾಲಿಕರಾಗಿರುವುದು ಚೆನ್ನಾಗಿದೆಯೋ? ಎಷ್ಟು ಸಾಧ್ಯವೋ ಅಷ್ಟು ಸೇವೆಯ ಸಂಬಂಧದಲ್ಲಿ ಬಾಲಕ, ತಮ್ಮ ಪುರುಷಾರ್ಥದ ಸ್ಥಿತಿಯಲ್ಲಿ ಮಾಲೀಕ, ಸಂಪರ್ಕ ಮತ್ತು ಸೇವೆಯಲ್ಲಿ ಬಾಲಕ, ನೆನಪಿನ ಯಾತ್ರೆಯಲ್ಲಿ ಮತ್ತು ಮಂಥನಮಾಡುವುದರಲ್ಲಿ ಮಾಲಿಕ. ಜೊತೆಗಾರರು ಮತ್ತು ಸಂಘಟನೆಯಲ್ಲಿ ಬಾಲಕ ಮತ್ತು ವ್ಯಕ್ತಿಗತವಾಗಿ ಮಾಲೀಕ ಇದಾಗಿದೆ. ಯುಕ್ತಿಯುಕ್ತವಾಗಿ ನಡೆಯುವುದು.

ಸದಾ ಉತ್ಸಾಹ ಉಲ್ಲಾಸದಲ್ಲಿರಲು ಏಕರಸವಾಗಿರಲು ಯಾವ ಬಿಂದು ನೆನಪಿರಬೇಕು? ಅದಕ್ಕಾಗಿ ಸದಾ ಯಾರು ಸಂಬಂಧದಲ್ಲಿ ಬರುತ್ತಾರೆಯೋ, ವಿದ್ಯಾರ್ಥಿಯಾಗಿರಲಿ, ಜೊತೆಗಾರರಾಗಿರಲಿ ಅವರನ್ನು ಸಂತುಷ್ಟಗೊಳಿಸುವ ಉತ್ಕಂಠವಿರಲಿ, ಉತ್ಸಾಹದಲ್ಲಿರುವುದರಿಂದ ಈಶ್ವರೀಯ ಉಲ್ಲಾಸ-ಉತ್ಸಾಹವು ಸದಾ ಏಕರಸವಾಗಿರುವವು. ಯಾರನ್ನು ನೋಡಿದರೂ ಅವರಿಂದ ಎಲ್ಲಾ ಸಮಯ ಗುಣ ಗ್ರಹಿಸಬೇಕು. ಸರ್ವರ ಗುಣದ ಬಲ ಸಿಗುವುದರಿಂದ ಸದಾಕಾಲಕ್ಕೆ ಉತ್ಸಾಹವಿರುವುದು. ಬೇರೆಯವರ ಭಿನ್ನ ಭಿನ್ನ ಸ್ವರೂಪ, ಭಿನ್ನ ಭಿನ್ನ ಮಾತುಗಳನ್ನು ನೋಡುವುದು, ಕೇಳುವುದು ಉತ್ಸಾಹ ಕಡಿಮೆಯಾಗಲು ಕಾರಣಗಳಾಗಿವೆ. ಗುಣಗಳನ್ನು ನೋಡುವ ಉತ್ಕಂಠತೆಯಿದ್ದರೆ ಏಕರಸ ಉತ್ಸಾಹವಿರುವುದು, ಗುಣದ ಕಳ್ಳನಾದರೆ ಬೇರೆ ಕಳ್ಳರು ಓಡಿಹೋಗುವರು.

ಸರ್ವರ ಮೇಲೆ ವಿಜಯಿಯಾಗುವ ಯುಕ್ತಿಗಳಾವವು? ವಿಜಯಿಯಾಗಲು ಪ್ರತಿಯೊಬ್ಬರ ಹೃದಯದ ರಹಸ್ಯವನ್ನು ಅರಿಯಬೇಕು. ಪ್ರತಿಯೊಬ್ಬರ ಮುಖಚರ್ಯೆಯನ್ನು ನೋಡಿದಾಗ, ಧ್ವನಿಯನ್ನು ಕೇಳಿದಾಗ ಅವರ ಹೃದಯದಾಳದ ರಹಸ್ಯವನ್ನು ತಿಳಿಯಲಾರಿರಾ? ಹೃದಯದ ರಹಸ್ಯವನ್ನು ತಿಳಿಯುವುದರಿಂದ ಸರ್ವರ ಹೃದಯದ ಮೇಲೆ ವಿಜಯಿಗಳಾಗಬಹುದು. ಅದಕ್ಕಾಗಿ ಅಂತರ್ಮುಖತೆ ಬೇಕು. ಎಷ್ಟು ರಹಸ್ಯವನ್ನು ಅರಿಯುವಿರೋ ಅಷ್ಟು ಸರ್ವರನ್ನು ರಾಜೀ ಮಾಡಬಹುದು. ಎಷ್ಟು ರಾಜೀ ಮಾಡುವಿರೋ ಅಷ್ಟು ರಹಸ್ಯವನ್ನು ಅರಿಯುವಿರಿ. ಆಗ ವಿಜಯಿಯಾಗಬಲ್ಲಿರಿ. ಸರಳಚಿತ್ತದ ಲಕ್ಷಣಗಳೇನು? ಸರಳಚಿತ್ತರಾಗಿರುವವರು ಬೇರೆಯವರನ್ನೂ ಸರಳಚಿತ್ತರನ್ನಾಗಿ ಮಾಡುತ್ತಾರೆ. ಸರಳಚಿತ್ತ ಎಂದರೆ ಯಾವ ಮಾತನ್ನು ಕೇಳಿದೆವೋ, ನೋಡಿದೆವೋ ಅದು ಸಾರಯುಕ್ತವಾಗಿರಬೇಕು ಮತ್ತು ಸಾರವನ್ನೇ ತೆಗೆದುಕೊಂಡು ಯಾವ ಮಾತು ಅಥವಾ ಕರ್ಮ ಸ್ವಯಂ ಮಾಡುತ್ತೇವೆಯೋ ಅದರಲ್ಲಿಯೂ ಸಾರವೇ ತುಂಬಿರಬೇಕು. ಆಗ ಪುರುಷಾರ್ಥವೂ ಸರಳವಾಗುವುದು ಮತ್ತು ಅಂತಹ ಸರಳ ಪುರುಷಾರ್ಥಿ ಅನ್ಯರನ್ನು ಸರಳ ಪುರುಷಾರ್ಥಿಯನ್ನಾಗಿ ಮಾಡುತ್ತಾನೆ. ಸರಳ ಪುರುಷಾರ್ಥಿ ಎಲ್ಲಾ ಮಾತುಗಳಲ್ಲಿ ಸರ್ವಾಂಗೀಣ ಆಗಿರುತ್ತಾನೆ. ಯಾವುದೇ ಮಾತಿನ ಕೊರತೆ ಕಂಡು ಬರುವುದಿಲ್ಲ. ಯಾವುದೇ ಮಾತಿನಲ್ಲಿ ಸಾಹಸ ಕಡಿಮೆಯಾಗುವುದಿಲ್ಲ. ಈಗ ಇದನ್ನು ಮಾಡುವುದಿಲ್ಲವೆಂಬ ಮಾತು ಬರುವುದಿಲ್ಲ. ಈ ಒಂದು ಮುಖ್ಯ ಅಭ್ಯಾಸವನ್ನು ಪ್ರಯೋಗದಲ್ಲಿ ತರುವುದರಿಂದ ಎಲ್ಲಾ ಮಾತುಗಳಲ್ಲಿ ಉದಾಹರಣೆ ಆಗುವಿರಿ. ಎಲ್ಲಾ ಮಾತುಗಳಲ್ಲಿ ಉದಾಹರಣೆಯಾಗುವುದರಿಂದ ಗೌರವದಿಂದ ತೇರ್ಗಡೆಯಾಗುವಿರಿ. ಅಭ್ಯಾಸವಿಲ್ಲವೆಂದು ಯಾವುದೇ ಮಾತಿನಲ್ಲಿ ಹೇಳುವುದಿಲ್ಲ. ಸರ್ವಾಂಗೀಣ ವಾಗುವುದು ಬೇರೆ ಮಾತು, ಇದು ಸಂಪಾದನೆಯಾಗಿದೆ. ಸರ್ವಾಂಗೀಣ ಉದಾಹರಣೆಯಾಗುವುದು ಬೇರೆ ಮಾತಾಗಿದೆ. ಪ್ರತಿಯೊಂದು ಮಾತೂ ಅನ್ಯರ ಮುಂದೆ ಉದಾಹರಣೆಯಾಗಿ ತೋರಿಸಬೇಕು. ಪ್ರತಿ ಮಾತಿನಲ್ಲಿ ಹೆಜ್ಜೆ ಮುಂದಿಡುವುದು, ಎಲ್ಲರಿಗೂ ತಮ್ಮಿಂದ ಸಂಪಾದನೆಯಲ್ಲಿ ಉತ್ಸಾಹ ತರಿಸುವುದಾಗಿದೆ ಸರ್ವಾಂಗೀಣ ಉದಾಹರಣೆಯಾಗುವುದು.

ಜ್ಞಾನದಲ್ಲಿ ಹೆಚ್ಚು ಇರುತ್ತೀರೋ ಯೋಗದಲ್ಲಿಯೋ ? ಜ್ಞಾನವಿದ್ದವರು ಅಷ್ಟು ಸಫಲತೆಯ ಮೂರ್ತಿಯಾಗುವುದಿಲ್ಲ, ಯೋಗದಲ್ಲಿರುವವರ ಸುಗಂಧ ಬಹಳ ಸಮಯದವರೆಗೆ ಇರುತ್ತದೆ. ಅವರ ಪ್ರಭಾವ ಸದಾಕಾಲವಿರುತ್ತದೆ. ಯಾರು ಕೇವಲ ಜ್ಞಾನದಲ್ಲಿರುತ್ತಾರೋ ಅವರು ಪ್ರಭಾವ ಸಮಯದಲ್ಲಿರುವುದಿಲ್ಲ. ಎಲ್ಲರ ಕೊರಳಲ್ಲಿ ವಿಜಯ ಮಾಲೆಯಿದೆ ಆದರೆ ನಂಬರವಾರ್, ಕೆಲವರ ಕೊರಳಲ್ಲಿ ದೊಡ್ಡದು ಮತ್ತೆ ಕೆಲವರ ಕೊರಳಲ್ಲಿ ಚಿಕ್ಕದು ಇದರ ಕಾರಣವೇನು? ಎಷ್ಟೆಷ್ಟು ಆರಂಭದಿಂದ ಮನಸ್ಸಿನಲ್ಲಿ, ಮಾತಿನಲ್ಲಿ, ಕರ್ಮದಲ್ಲಿ ಬಂದಂತಹ ಸಮಸ್ಯೆಗಳನ್ನು ಅಥವಾ ವಿಘ್ನಗಳ ಮೇಲೆ ವಿಜಯಿಯಾಗಿರುವಿರೊ ಅದಕ್ಕನುಸಾರ ಪ್ರತಿಯೊಬ್ಬರ ವಿಜಯ ಮಾಲೆಯಾಗುತ್ತದೆ. ನನ್ನ ವಿಜಯ ಮಾಲೆ ಎಷ್ಟು ದೊಡ್ಡದಿದೆಯೆಂದು ಆರಂಭದಿಂದ ನೋಡಿದರೆ ಗೊತ್ತಾಗುತ್ತದೆ. ಇತ್ತೀಚೆಗೆ ಚಿಕ್ಕ ಮಾಲೆಯನ್ನೂ ಮಾಡುತ್ತಾರೆ ದೊಡ್ಡದನ್ನೂ ಮಾಡುತ್ತಾರೆ. ಯಾರು ಎಷ್ಟು ವಿಜಯಿಯಾಗುತ್ತಾರೆಯೋ, ಅಷ್ಟು ದೊಡ್ಡ ವಿಜಯಮಾಲೆ ಹಾಕಿಕೊಳ್ಳುತ್ತಾರೆ. ಚತುರ್ಭುಜದಲ್ಲಿ ಮಾಲೆಯ ಚಿಹ್ನೆಯು ಒಬ್ಬರದಲ್ಲ, ವಿಜಯಿರತ್ನಗಳ ಚಿಹ್ನೆಯಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ-ತಮ್ಮ ವಿಜಯೀಮಾಲೆಯ ಸಾಕ್ಷಾತ್ಕಾರ ಮಾಡಬಹುದು. ಎಷ್ಟು ವಿಜಯೀಮಾಲೆಯನ್ನು ಧರಿಸಲು ಅಧಿಕಾರಿಯಾಗುವಿರೋ ಅಷ್ಟು ಕಿರೀಟ ಮತ್ತು ಸಿಂಹಾಸನ ಅದೇ ಪ್ರಮಾಣದಲ್ಲಿ ಸಿಗುವುದು. ಈ ಸಮಯ ವಿಜಯಮಾಲೆಗನುಸಾರ ತಮ್ಮ ಭವಿಷ್ಯ ಸಿಂಹಾಸನವನ್ನೂ ತಿಳಿಯಬಹುದು. ಇಲ್ಲಿಯೇ ಈಗ ಎಲ್ಲರಿಗೂ ಸಾಕ್ಷಾತ್ಕಾರವಾಗುವುದು. ಸಾಕ್ಷಾತ್ಕಾರ ಕೇವಲ ದಿವ್ಯದೃಷ್ಟಿಯಿಂದಲ್ಲ. ಪ್ರತ್ಯಕ್ಷ ಸಾಕ್ಷಾತ್ಕಾರವೂ ಆಗುವುದು. ಪ್ರತ್ಯಕ್ಷದ ಪ್ರಮಾಣ ಈ ಸಾಕ್ಷಾತ್ಕಾರವಾಗಿದೆ. ಆದ್ದರಿಂದ ವಿಜಯೀಮಾಲೆ ಎಷ್ಟು ದೊಡ್ಡದಾಗಿದೆ ಎಂದು ಕೇಳಿದೆವು. ಒಂದು ಸೇವೆಯ ಬಲ, ಇನ್ನೊಂದು ಸ್ನೇಹದ ಬಲ ಆದ್ದರಿಂದ ಹೆಚ್ಚಿನ ಬಲ ಸಿಗುವ ಕಾರಣ ವಿಶೇಷ ಸೇವೆಯಾಗುತ್ತಿದೆ. ಕೆಲವರು ತಮ್ಮಲ್ಲಿ ಶರೀರದ ಶಕ್ತಿಯಿಲ್ಲವೆಂದು ತಿಳಿಯುತ್ತಾರೆ ಆದರೆ ಈ ಬಲವಿರುವ ಕಾರಣ ಬೇರೆ ಯಾರೋ ನಡೆಸುತ್ತಿರುವ ಅನುಭವ

ಮಾಡುತ್ತಾರೆ. ಸಾಕಾರ ರೂಪದಲ್ಲಿ ನಿಮಿತ್ತರಾದ ಕಾರಣ ಹೆಚ್ಚಿನ ಬಲವಿತ್ತು ಅದೇ ರೀತಿ ನಿಮಿತ್ತರಾಗುವುದರಿಂದ ಹೆಚ್ಚಿನ ಬಲ ಸಿಗುತ್ತದೆ.

ಅತೀಂದ್ರಿಯ ಸುಖದ ಅನುಭವವಾಗುವುದರಿಂದ ಏನಾಗುತ್ತದೆ? ಇಂದ್ರಿಯಗಳ ಸುಖದ ಆಕರ್ಷಣೆ ಸಮಾಪ್ತಿಯಾಗುತ್ತದೆ.

ದುಃಖವನ್ನು ಕೊಡುವ ವಸ್ತು ಯಾವುದು?

ಇಂದ್ರಿಯಗಳ ಆಕರ್ಷಣೆ, ಸಂಬಂಧದ ಆಕರ್ಷಣೆ ಅಥವಾ ಯಾವುದೇ ಕರ್ಮೇಂದ್ರಿಯಗಳಿಗೆ ವಶವಾಗುವುದರಿಂದ ಭಿನ್ನ ಭಿನ್ನ ಆಕರ್ಷಣೆಗಳು ಆಗುತ್ತವೆಯೋ ಅವು ಅತೀಂದ್ರಿಯ ಸುಖ ಅಥವಾ ಖುಷಿ ಕೊಡುವಲ್ಲಿ ಬಂಧನ ಹಾಕುತ್ತವೆ. ಒಂದು ನೆಲೆಯಲ್ಲಿ ಬುದ್ಧಿ ಸ್ಥಿರವಾಗುವುದರಿಂದ ಏಕರಸ ಅವಸ್ಥೆ ಇರುತ್ತದೆ. ಆದ್ದರಿಂದ ಸವಾ ಬುದ್ಧಿಯನ್ನು ಒಂದು ನೆಲೆಯಲ್ಲಿ ಸ್ಥಿರವಾಗಿರಿಸಲು ಸಿಕ್ಕಂತಹ ಯುಕ್ತಿಯನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳಿ. ಅಲುಗಾಡಲು ಬಿಡಬೇಡಿ, ಅಲುಗಾಡುವುದು ಎಂದರೆ ಅಲ್ಲೋಲಕಲ್ಲೋಲವಾಗುವುದು. ಮತ್ತೆ ಸಮಯವೂ ಬಹಳ ವ್ಯರ್ಥವಾಗುವುದು. ಯುದ್ಧದಲ್ಲಿ ಸಮಯ ಬಹಳ ಹೋಗುತ್ತದೆ.

ಶಕ್ತಿಯರ ಚಿತ್ರದಲ್ಲಿ ಶಕ್ತಿಗಳ ಯಾವ ಚಿಹ್ನೆಯನ್ನು ತೋರಿಸುತ್ತಾರೆ? ಒಂದು ಅಲಂಕಾರಿ ಮತ್ತೊಂದು ಸಂಹಾರಿಯೂ ಆಗಿದ್ದಾಳೆ. ಅಲಂಕಾರ ಏತಕ್ಕಾಗಿ? ಸಂಹಾರ ಮಾಡಲು. ಅದೇ ರೀತಿ ಅಲಂಕಾರಿ, ಸಂಹಾರಿ ಮೂರ್ತಿ ಎಂದು ತಮ್ಮನ್ನು ತಿಳಿದು ನಡೆಯುತ್ತಿರಿ. ನಾನು ಸಂಹಾರ ಮೂರ್ತಿ ಎಂಬುದು ಸ್ಥಿತಿಯಲ್ಲಿದ್ದಾಗ ಎಂದೂ ಮಾಯೆಗೆ ವಶವಾಗುವುದಿಲ್ಲ. ಸದಾ ಎಲ್ಲಾ ಅಲಂಕಾರಗಳನ್ನು ಸರಿಯಾಗಿ ಧರಿಸಿದ್ದೇನಾ ಎಂಬುದನ್ನು ಪರಿಶೀಲನೆ ಮಾಡಿಕೊಳ್ಳಿ. ಯಾವುದೇ ಅಲಂಕಾರವನ್ನು ಧಾರಣೆ ಮಾಡಿರದಿದ್ದರೆ ವಿಜಯಿಯಾಗಲಾರಿರಿ. ಸುಮಂಗಲಿಯು ತನ್ನ ಸೌಭಾಗ್ಯದ ಚಿಹ್ನೆಯನ್ನು ಸದಾ ಧರಿಸಿರುತ್ತಾಳೆ. ಸ್ಥೂಲ ಶೃಂಗಾರ ಕಡಿಮೆಯಾದಾಗ ಅಥವಾ ಹೆಚ್ಚು ಕಡಿಮೆಯಾದಾಗ ಅದನ್ನು ಮತ್ತೆಮತ್ತೆ ಸರಿಪಡಿಸಿಕೊಳ್ಳುತ್ತಾರೆ. ಆದ್ದರಿಂದ ಯಾವುದೇ ಅಲಂಕಾರ ರೂಪದ ಶೃಂಗಾರ ಕೆಟ್ಟಿದ್ದರೆ ಅದನ್ನು ಸರಿಪಡಿಸಿಕೊಳ್ಳಬೇಕು.

ಹಳಬರು ತಮ್ಮ ಪೂರ್ಣ ಅಧಿಕಾರವನ್ನು ಪಡೆದುಕೊಂಡು ಹೋಗಬೇಕು. ಅಧಿಕಾರ ಪಡೆಯಲು ತಮ್ಮ ಮೇಲೆ ಮುದ್ರೆ ಹಾಕಿಸಿಕೊಳ್ಳಲು ಮಧುಬನಕ್ಕೆ ಬರುತ್ತೀರಿ. ಈ ಮಧುಬನವಾಗಿದೆ ಅಂತಿಮ ಮುದ್ರೆ ಹಾಕುವ ಸ್ಥಾನ. ಪೋಸ್ಟ್ ಆಫೀಸನಲ್ಲಿ ಅಂತಿಮ ಮುದ್ರೆಯನ್ನು ಹಾಕಿದಾಗ ಪತ್ರ ಹೋಗುತ್ತದೆ. ಸ್ವರ್ಗದ ಅಧಿಕಾರಿಯಾಗುವ ಮುದ್ರೆ ಮಧುಬನವಾಗಿದೆ. ಮಧುಬನದಲ್ಲಿ ಬರುವುದು ಎಂದರೆ ಕೋಟಿ ಪಟ್ಟು ಸಂಪಾದನೆ ಮಾಡುವುದು. ವಿಘ್ನವಿನಾಶಕರಾದವರು ವಿಘ್ನಹಾರ ಆಗುವುದಿಲ್ಲ. ತಮ್ಮನ್ನು ಕಂಬೈನ್ಡ್ ಎಂದು ತಿಳಿಯಿರಿ. ಬಾಪ್‌ದಾದಾ ಕ್ಷಣಕ್ಷಣದ ಜೊತೆಗಾರರಾಗಿದ್ದಾರೆ. ಜನ್ಮ ಪಡೆದಂದಿನಿಂದ ಜೊತೆಗಿದ್ದಾರೆ. ಇಲ್ಲಿ ಜನ್ಮವೂ ಈ ಸಮಯದಲ್ಲಿ ಆಗುತ್ತದೆ. ಜೊತೆಗಾರನೂ ಇದೇ ಸಮಯದಲ್ಲಿ ಸಿಗುತ್ತಾನೆ. ಲೌಕಿಕದಲ್ಲಿ ಜನ್ಮ ಮೊದಲು ಆಗುತ್ತದೆ ಮತ್ತು ಜೊತೆಗಾರ ನಂತರ ಸಿಗುತ್ತಾನೆ. ಇಲ್ಲಿ ಈಗ ಜನ್ಮ, ಈಗಲೇ ಜೊತೆಗಾರ.

ಮುಂಬಯಿ ಶಹರದಲ್ಲಿರುತ್ತ ಅತೀತ ಆಗಿದ್ದೀರಾ? ಯಾರು ಸ್ವಯಂ ಅಲಿಪ್ತರಾಗಿಲ್ಲವೋ ಅವರು ಬೇರೆಯವರ ಮುಂದೆ ಉದಾಹರಣೆ ಆಗಲಾರರು. ಧಾರಣೆಯ ಜೀವನ ಬೇರೆಯವರ ಮುಂದೆ ಪ್ರಮಾಣವಾಗುತ್ತದೆ. ಯಾರು ಪ್ರಮಾಣವಾಗಬಲ್ಲರು? ಅತೀತರಾಗಿರುವವರು. ಮುಂಬಯಿಯಲ್ಲಿ ಯಾರ ಪೂಜೆ ಜಾಸ್ತಿಯಾಗುತ್ತದೆ? (ಗಣೇಶ), ಅವನನ್ನು ವಿಘ್ನ ವಿನಾಶಕ ಎಂದು ಕರೆಯುತ್ತಾರೆ. ಗಣೇಶನ ಅರ್ಥವಾಗಿದೆ - ಜ್ಞಾನಪೂರ್ಣ, ವಿದ್ಯಾಪತಿ, ಮಾಸ್ಟರ್ ಜ್ಞಾನಪೂರ್ಣರು ಎಂದೂ ಸೋಲಲಾರರು ಏಕೆಂದರೆ ಜ್ಞಾನವನ್ನೇ ಪ್ರಕಾಶ-ಶಕ್ತಿ  ಎಂದು ಕರೆಯುತ್ತಾರೆ ಮತ್ತೆ ಗುರಿ ತಲುಪಲು ಸಹಜವಾಗುತ್ತದೆ. ಗುರಿ ಸೇರಲು ಪ್ರಕಾಶ ಮತ್ತು ಶಕ್ತಿಗಳೆರಡೂ ಬೇಕು.

ಬಾಪ್ ದಾದಾರ ಯಾವ ಮುಖ್ಯ ಗುಣವನ್ನು ವರ್ಣನೆ ಮಾಡುತ್ತೀರಿ? ಜ್ಞಾನ, ಪ್ರೇಮ, ಆನಂದ, ಸುಖ-ಶಾಂತಿಯ ಸಾಗರ, ಯಾವುದೇ ಕರ್ಮ ಮಾಡಿ, ಅವೆಲ್ಲವೂ ಜ್ಞಾನ ಸಹಿತವಾಗಿರಲಿ, ಪ್ರತಿಯೊಂದು ಕರ್ಮದಿಂದ ಸರ್ವಾತ್ಮರಿಗೆ ಸುಖ-ಶಾಂತಿ, ಆನಂದದ ಅನುಭವವಾಗಲಿ. ತಮ್ಮ ಮುಖದಿಂದ ಬಾಪ್ ದಾದಾ ಇಬ್ಬರೂ ಕಂಡುಬರುವಂತೆ ಮಾಡಿಕೊಳ್ಳಬೇಕು. ಯಾವುದೇ ಕರ್ಮವನ್ನು ಮಾಡುತ್ತಿದ್ದರೂ ಪ್ರತಿಯೊಂದು ಕರ್ಮದಲ್ಲಿ ಬಾಪ್ ದಾದಾರ ಗುಣ ಪ್ರತ್ಯಕ್ಷವಾಗಿರಲಿ. ಇದನ್ನೇ ತಂದೆಯ ಗುಣಗಳ ಸಮಾನತೆಯೆಂದು ಹೇಳುತ್ತಾರೆ. ಇವರು ಯಾರ ಮಕ್ಕಳು? ಯಾರಿಂದ ಆದರು ಎಂದು ತಾವು ತಿಳಿಸುವ ಆವಶ್ಯಕತೆಯಿಲ್ಲ, ತಮ್ಮ ಕರ್ಮಗಳನ್ನು ನೋಡಿ ಅವರ ಮನಸ್ಸಿನಲ್ಲಿ ಸಂಕಲ್ಪ ಬರುವುದು. ವಿದ್ಯಾರ್ಥಿ ಚೆನ್ನಾಗಿ ಅಧ್ಯಯನ ಮಾಡಿ ವಿದ್ಯಾರ್ಥಿವೇತನ ತೆಗೆದುಕೊಳ್ಳುವವನಾಗಿದ್ದರೆ ಅವನನ್ನು ನೋಡಿ - ಶಿಕ್ಷಕನ ನೆನಪು ಬರುತ್ತದೆ, ಆದ್ದರಿಂದ ವಿದ್ಯಾರ್ಥಿ ಶಿಕ್ಷಕನನ್ನು ತೋರಿಸುತ್ತಾನೆ" ಎಂಬ ಗಾದೆ ಮಾತಿದೆ. ಇದೂ ಸಹ ಸೇವೆ ಮಾಡುವ ವಿಧಿಯಾಗಿದೆ. ಅಲೌಕಿಕ ಜನ್ಮದ ಪ್ರತಿಯೊಂದು ಕರ್ಮ ಸೇವೆಗಾಗಿರಲಿ. ಎಷ್ಟು ಸೇವೆ ಮಾಡುವಿರೋ ಅಷ್ಟು ಭವಿಷ್ಯ ಶ್ರೇಷ್ಠವಾಗುವುದು. ಎಷ್ಟು ತಮ್ಮನ್ನು ಸೇವೆಯಲ್ಲಿ ವ್ಯಸ್ತ ಮಾಡಿಕೊಳ್ಳುವಿರೋ ಅಷ್ಟು ಮಾಯೆಯ ಆಕ್ರಮಣದಿಂದ ಬಚಾವಾಗುವಿರಿ ಬುದ್ಧಿಯನ್ನು ನಿಶ್ಚಿತಗೊಳಿಸಿದರೆ ಯಾರೂ ತೊಂದರೆ ಕೊಡಲಾರರು. ಇದೂ ಸಹ ಸಂಗಮಯುಗದ ವರದಾನವಾಗಿದೆ - ಏಕರಸ ಸ್ಥಿತಿ, ಒಬ್ಬನ ನೆನಪು, ಒಬ್ಬನ ಸೇವೆಯಲ್ಲಿ ಎಷ್ಟು, ಯಾರು ವರದಾನ ಪಡೆದುಕೊಳ್ಳುವರೋ ಅಷ್ಟು ನಶೆಯಲ್ಲಿರುವವನಿಗೆ ಬೇರೆ ಏನೂ ತೋಚುವುದಿಲ್ಲ. ಅದೇ ರೀತಿ ಈ ಈಶ್ವರೀಯ ನಶೆಯಲ್ಲಿರುವುದರಿಂದ ಜಗತ್ತಿನ ಆಕರ್ಷಣೆಯಿಂದ ದೂರವಾಗುವಿರಿ. (ಬಾಬಾ ನಾವು ಬಂಧನದಲ್ಲಿರುವವರು, ಸೇವೆ ಮಾಡುವುದಿಲ್ಲವೆಂದು ಸಂಕಲ್ಪ ನಡೆಯುತ್ತದೆ ಎಂದು ಬಂಧನದಲ್ಲಿ ಇರುವವಳು ಕೇಳಿದಳು) ಬಂಧನದಲ್ಲಿರುವವರು ಸ್ವತಂತ್ರರಾಗಿರುವವರಿಗಿಂತ ಚೆನ್ನಾಗಿದ್ದಾರೆ. ಸ್ವತಂತ್ರವಾಗಿರುವವರು ಹುಡುಗಾಟಿಕೆ ಮಾಡುತ್ತಾರೆ. ಬಂಧನದಲ್ಲಿ ಇರುವವರ ನೆನಪು ಚೆನ್ನಾಗಿರುತ್ತದೆ. ನೆನಪನ್ನು ಶಕ್ತಿಶಾಲಿ ಮಾಡಿಕೊಳ್ಳಿ. ನೆನಪು ಕಡಿಮೆಯಿದ್ದರೆ ಶಕ್ತಿಯಿರುವುದಿಲ್ಲ. ನೆನಪಿನಲ್ಲಿರುತ್ತಾ ಸೇವೆಯನ್ನು ಮಾಡುವುದಿಲ್ಲವೆಂದು ವ್ಯರ್ಥ ಯೋಚಿಸಬೇಡಿ. ಯಾವ ಸಮಯದಲ್ಲಿಯೂ ನೆನಪಿನಲ್ಲಿದ್ದರೆ ಸಂಪಾದನೆಯಾಗುವುದು. ಈ ರೀತಿ ಯೋಚಿಸಿದರೆ ಶಕ್ತಿ ಕಡಿಮೆಯಾಗುವುದು. ಬಂಧನದಿಂದ ಮುಕ್ತರಾಗಲು ಮನೆಯವರು ಪರಿವರ್ತನೆಯನ್ನು ಕಾಣುವಂತೆ ತಮ್ಮ ನಡತೆಯನ್ನು ಬದಲಿಸಿಕೊಳ್ಳಿ. ಕಠಿಣ ಸಂಸ್ಕಾರಗಳನ್ನು ಬದಲಿಸಿಕೊಳ್ಳಿ. ಅವರು ತಮ್ಮ ಕೆಲಸ ಮಾಡಲಿ ತಾವು ತಮ್ಮ ಕೆಲಸ ಮಾಡಿ. ಅವರ ಕೆಲಸವನ್ನು ನೋಡಿ ಭಯಪಡಬೇಡಿ. ಎಷ್ಟು ಅವರು ತಮ್ಮ ಕೆಲಸವನ್ನು ಬಲಪೂರ್ವಕ ಮಾಡುವರೋ ಅಷ್ಟು ತಾವು ತಮ್ಮ ಕೆಲಸವನ್ನು ಮಾಡಿ ಅವರ ಗುಣವನ್ನು ಗ್ರಹಿಸಿ. ಅವರು ಹೇಗೆ ತಮ್ಮ ಕರ್ತವ್ಯವನ್ನು ಮಾಡುತ್ತಾರೋ ಹಾಗೆ ನೀವೂ ಮಾಡಿ.

ಇಡೀ ಸೃಷ್ಟಿಯ ಆತ್ಮರಿಗೆ ಹೋಲಿಸಿದರೆ ಎಷ್ಟು ಕಡಿಮೆ ಆತ್ಮರಿಗೆ ಈ ಭಾಗ್ಯ ಸಿಕ್ಕಿದೆಯೆಂದರೆ ಎಷ್ಟು ಖುಷಿಯಾಗಬೇಕು. ಖುಷಿ ಕಣ್ಣುಗಳಿಂದ, ಮಸ್ತಕದಿಂದ, ತುಟಿಗಳಿಂದ ಹೊರಹೊಮ್ಮಬೇಕು. ಖುಷಿಯ ಖಜಾನೆಯ ಮಾಲಿಕನ ಮಕ್ಕಳಾಗಿರುವಿರಿ. ಆದ್ದರಿಂದ

ಖಜಾನೆಗೆ ಅಧಿಕಾರಿಗಳಲ್ಲವೇ? 5000 ವರ್ಷಗಳ ಹಿಂದೆಯೂ ಬಂದಿದ್ದಿರಿ, ಈ ಅನುಭವವಿದೆಯಾ? ಸ್ಮೃತಿ ಬರುತ್ತದೆಯೇ? ಸ್ಪಷ್ಟ ಸ್ಮೃತಿಯ ಲಕ್ಷಣವೇನಾಗಿದೆ? ಯಾರನ್ನು ಭೇಟಿಯಾದರೂ ತಮ್ಮವರು ಎಂಬ ಅನುಭವ ಮತ್ತು ಸ್ವಸ್ಥಾನಕ್ಕೆ ಬಂದಿರುವ, ಹುಡುಕುತ್ತಿರುವಂತಹ ಸ್ಥಾನ ಇದೇ ಆಗಿದೆ ಎಂದು ಅನುಭವ ಮಾಡುವರು. ಯಾವುದಾದರೂ ವಸ್ತು ಹುಡುಕಾಟದ ನಂತರ ಸಿಕ್ಕಂತೆ ನಿಜವಾದ ಪರಿವಾರದ ಜೊತೆಗೆ ಮಿಲನ ಮಾಡುವ ತಮ್ಮತನದ ಅನುಭವವಾಗಬೇಕು. ಇದನ್ನೇ ಸ್ಪಷ್ಟ ಅನುಭವವೆಂದು ಹೇಳಲಾಗುತ್ತದೆ. ಇನ್ನೊಂದು ಮಾತು ಯಾವ ಮಾತನ್ನು ಕೇಳುವರೋ ಅದು ಅವರಿಗೆ ಸ್ಪಷ್ಟ ತಿಳಿಯುವುದು. ಹೇಗೆ ಪವಿತ್ರತೆಯ ಮಾತು ಜನರಿಗೆ ಕಠಿಣವೆನಿಸುವುದು ಆದರೆ ಕಲ್ಪದ ಹಿಂದಿನವರಿಗೆ, ಅಧಿಕಾರಿಯಾದವರಿಗೆ ಇದು ನಮ್ಮ ಸ್ವಧರ್ಮ ಎಂದು ತಿಳಿಯುವರು. ಅವರಿಗೆ ಸಹಜವೆನಿಸುವುದು. ಪರಿಚಯದ ಮೂರ್ತಿಗಳಿದ್ದರೆ ತಮ್ಮದೇ ಎಂದು ಅನುಭವಾಗುವಂತೆ ಸಮೀಪದ ಸಂಬಂದದಲ್ಲಿ ಬರುವವರು ಸ್ಪಷ್ಟ ಅನುಭವ ಮಾಡುವರು. ಇಂತಹ ಅನುಭವೀ ಆತ್ಮರಿಗೆ ಕರ್ಮ ಬಂಧನ ಕತ್ತರಿಸಲು ಸಮಯ ಬೇಕಾಗುವುದಿಲ್ಲ. ನಕಲಿ ವಸ್ತುವನ್ನು ಬಿಡುವುದು ಕಷ್ಟವಾಗುವುದಿಲ್ಲ. ಒಳ್ಳೆಯದು.

ಅವ್ಯಕ್ತ ಮುರಳಿ 21-01-1971.

***ಅವ್ಯಕ್ತ ವತನದ ಅಲೌಕಿಕ ನಿಮಂತ್ರಣ.***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಅವ್ಯಕ್ತ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಅವ್ಯಕ್ತ ಮಿಲನವನ್ನು ಮಾಡಿದ್ದೇನೆ.

2. ನಾನು ಸರ್ವಶಕ್ತಿಗಳನ್ನು ಧಾರಣೆ ಮಾಡಿರುವ ಮಾಸ್ಟರ್ ಸರ್ವಶಕ್ತಿವಂತನು.

3. ನಾನು ನಿರಂತರ ಅವ್ಯಕ್ತ ಸ್ಥಿತಿಯ ಅನುಭವದಿಂದ ಬುದ್ಧಿಯ ಬಲವನ್ನು ಪಡೆದು ನನ್ನ ಸರ್ವಶಕ್ತಿವಂತ ಸ್ವರೂಪದ ಸಾಕ್ಷಾತ್ಕಾರವನ್ನು ಮಾಡಿಕೊಂಡಿದ್ದೇನೆ.

4. ನಾನು ವ್ಯರ್ಥ ಸಂಕಲ್ಪ, ವ್ಯರ್ಥ ಮಾತು, ವ್ಯರ್ಥಕರ್ಮ - ಈ ಮೂರನ್ನೂ ಸಮಾಪ್ತಿ ಮಾಡಿರುವ ಸಮರ್ಥ ಸ್ವರೂಪ.

5. ನಾನು ತಂದೆಯ ಸಮಾನವಾಗಿ ಎಲ್ಲಾ ಕರ್ತವ್ಯಗಳನ್ನು ಸಂಪನ್ನ ಮಾಡಿ (ಪೂರ್ಣಗೊಳಿಸಿ) ಸಂಪೂರ್ಣಸ್ಥಿತಿಗೆ ತಲುಪಿದ್ದೇನೆ.

6. ನಾನು ಸರ್ವಾತ್ಮರಿಗೆ ಸುಖ ಶಾಂತಿಯನ್ನು ಅನುಭವ ಮಾಡಿಸುವ ಅನುಭವೀ ಸ್ವರೂಪ.

7. ನಾನು ಸ್ಥಿತಿಯನ್ನು ಸ್ಥಿರವಾಗಿ ಇಟ್ಟುಕೊಂಡು ಅನ್ಯ ಆತ್ಮರಿಗೂ ಸಂಪನ್ನ ಮಾಡಿಸುವಷ್ಟು ಅತೀಂದ್ರಿಯ ಸುಖ ಮತ್ತು ಸರ್ವಶಕ್ತಿಗಳಿಂದ ಸಂಪನ್ನವಾಗಿದ್ದೇನೆ.

8. ನಾನು ನನ್ನ ಸಂತುಷ್ಟತೆಯಿಂದ ಅನ್ಯರಿಗೂ ಸಂತುಷ್ಟತೆಯ ಅನುಭವವನ್ನು ಮಾಡಿಸುತ್ತಿದ್ದೇನೆ.

9. ನಾನು ಸಂಪೂರ್ಣವಾಗಿ ತಯಾರಾಗಿ ಬ್ರಾಹ್ಮಣ ಕರ್ತವ್ಯಗಳೆಲ್ಲವನ್ನು ಸಂಪನ್ನಗೊಳಿಸಿದ್ದೇನೆ.